> ಒಮ್ಮೆ ತ.ರಾ.ಸು. ಅನಾರೋಗ್ಯದಿಂದ ಮನೆ ಹತ್ತಿರದ ಆಸ್ಪತ್ರೆ ಸೇರಿದ್ದರು. ಕೆಲವು ದಿನಗಳು ಕಳೆದ ಬಳಿಕ ವೈದ್ಯರಿಗೂ ತಿಳಿಸದೆ ಮನೆಗೆ ಬಂದು, ತಪಸ್ಸಿನಂತೆ ಕುಳಿತು ಸುಮಾರು ನಲವತ್ತು ದಿನಗಳಲ್ಲಿ 'ದುರ್ಗಾಸ್ತಮಾನ' ಕಾದಂಬರಿ ಬರೆದು ಮುಗಿಸಿ ಆಮೇಲೆ ಮತ್ತೆ ಆಸ್ಪತ್ರೆಗೆ ಹೋಗಿ ಮಲಗಿಕೊಂಡರು!

ಇದು ನನ್ನ ಬದುಕಿನ ಬಹುಮುಖ್ಯ ತಿರುವು. ಓದು ಮುಗಿದ ಬಳಿಕ ಗೋವೆಯ ನ್ಯೂ ಇರಾ ಶಾಲೆಯಲ್ಲಿ ಹಿಂದಿ ಅಧ್ಯಾಪಕನಾಗಿ ನನ್ನ ವೃತ್ತಿಜೀವನ ಪ್ರಾರಂಭವಾಯಿತು.

◆ **ಕನ್ನಡದ ಪ್ರಸಿದ್ಧ ಬರಹಗಾರ ಅ.ನ.ಕೃ. ಅವರ ನಿಕಟವರ್ತಿಯಾಗಿದ್ದವರು ನೀವು. ಅ.ನ.ಕೃ. ಅವರೊಂದಿಗಿನ ನಿಮ್ಮ ವಿಶೇಷ ಅನುಭವಗಳನ್ನು ಹೇಳಿ.**

ನಾನು ಅ.ನ.ಕೃ. ಮನೆಯಲ್ಲಿದ್ದಾಗ ಅಂದಿನ ಅನೇಕ ಲೇಖಕರನ್ನು ಮುಖತಃ ಕಾಣುವ, ಅವರ ಮಾತುಗಳನ್ನು ಕೇಳುವ ಸದವಕಾಶ ಒದಗಿ ಬಂದಿತ್ತು. ಅವರ ಮನೆಯಲ್ಲಿ ನಡೆಯುತ್ತಿದ್ದ ಚರ್ಚಾಕೂಟದಲ್ಲಿ ಅನೇಕ ಸಾಹಿತಿಗಳು ಪಾಲುಗೊಳ್ಳುತ್ತಿದ್ದರು.

ಅ.ನ.ಕೃ. ಪ್ರಸಿದ್ಧ ಲೇಖಕರು ಮಾತ್ರವಲ್ಲ, ಉತ್ತಮ ವಾಕ್ಪಟುವೂ ಹೌದು. ಕರ್ನಾಟಕದಲ್ಲಿ ಅತ್ಯುತ್ತಮ ಭಾಷಣಕಾರರೆಂದರೆ ಪಂಡಿತ ತಾರಾನಾಥ ಹಾಗೂ ಅ.ನ.ಕೃ. ಇಬ್ಬರೇ. ಮೂರನೆಯವರು ಇಲ್ಲವೆಂದೇ ಹೇಳಬಹುದು. ಅ.ನ.ಕೃ. ಅವರಿಗೆ ಭಾಷಣ ಮಾಡಲು ಹೇಳಿದರೆ ಅವರು ಪೂರ್ವ ತಯಾರಿ ಮಾಡಿಕೊಂಡು ಹೋಗುತ್ತಿರಲಿಲ್ಲ. ಆದರೆ ಒಮ್ಮೆ ಮಾತಿಗೆ ನಿಂತರೆಂದರೆ ಅದು ವಿದ್ವತ್ಪೂರ್ಣ ಭಾಷಣವೇ ಆಗಿರುತ್ತಿತ್ತು. ಅವರು ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಚೆನ್ನಾಗಿ ಅಧ್ಯಯನ ಮಾಡಿದವರು. ಅಪಾರ ಓದು ಮತ್ತು ಆಳವಾದ ಜ್ಞಾನ ಅವರ ವ್ಯಕ್ತಿತ್ವದ ಭಾಗವಾಗಿದ್ದವು. ಒಮ್ಮೆ ಬಸವ ಜಯಂತಿಯ ಸಂದರ್ಭದಲ್ಲಿ ಅವರನ್ನು ಬಳ್ಳಾರಿಯಲ್ಲಿ ಭಾಷಣ ಮಾಡಲು ಕರೆಸಲಾಗಿತ್ತು. ಅಂದು ಅವರು ಬಸವಣ್ಣ ಮತ್ತು ವಚನ ಸಾಹಿತ್ಯದ ಕುರಿತು ಬೆಳಗ್ಗೆ ಹತ್ತು ಗಂಟೆಯಿಂದ ಸಂಜೆಯವರೆಗೆ ಬಿಡುವಿಲ್ಲದೆ ನಿರಂತರವಾಗಿ ಮಾತನಾಡಿದ್ದರು! ನಾನು ಗಮನಿಸಿದ ಹಾಗೆ ಕರ್ನಾಟಕ ಮತ್ತು ಕನ್ನಡ ಭಾಷೆಯ ಕುರಿತು ಅತಿ ಹೆಚ್ಚು ಅಭಿಮಾನವನ್ನು ಹೊಂದಿದವರು ಅ.ನ.ಕೃ. ಲೇಖಕನಿಗಿಂತ ಆತನ ಕೃತಿ ಮುಖ್ಯವೆನ್ನುತ್ತಿದ್ದ ಈ ಮಹಾನ್ ಸಾಹಿತಿಯ ಜೊತೆ ನನ್ನದು ನಾಲ್ಕು ದಶಕಗಳ ಒಡನಾಟ.

ಅ.ನ.ಕೃ. ಜನಪ್ರಿಯ ಸಾಹಿತಿಯಾಗಿದ್ದರಿಂದ ಅವರ ಕಾದಂಬರಿಗಳಿಗೆ ಪ್ರಕಾಶಕರಿಂದ ನಿರಂತರ ಬೇಡಿಕೆ ಇರುತ್ತಿತ್ತು. ಅವರು ಒಂದೇ ಬಾರಿ ನಾಲ್ಕೈದು ಕಾದಂಬರಿಗಳನ್ನು ಒಟ್ಟೊಟ್ಟಿಗೆ ಬರೆಯುತ್ತಿದ್ದರು. ಆದರೆ ಪ್ರತಿಯೊಂದು ಕಾದಂಬರಿಯ ವಸ್ತು, ಪಾತ್ರಗಳು, ಘಟನಾವಳಿಗಳ ಚೌಕಟ್ಟನ್ನು ಅಚ್ಚುಕಟ್ಟಾಗಿ ರೂಪಿಸಿಯೇ ಬರವಣಿಗೆಯನ್ನು ಪ್ರಾರಂಭಿಸುತ್ತಿದ್ದರು. ಬೆಂಗಳೂರಿನ ಅವೆನ್ಯೂ ರಸ್ತೆಯ ಸ್ಟ್ಯಾಂಡರ್ಡ್ ಬುಕ್ ಡಿಪೋದವರು ಅ.ನ.ಕೃ. ಅವರ ಕಾದಂಬರಿ ಪ್ರಕಟವಾಗಿ ಮಾರುಕಟ್ಟೆಗೆ ಬರುವ ಸೂಚನೆಯ ಫಲಕವನ್ನು ಹಾಕಿದರೆ ಜನರು ರೇಶನ್ ಅಂಗಡಿಯಲ್ಲಿ ನಿಂತ ಹಾಗೆ ಕ್ಯೂನಲ್ಲಿ ನಿಂತು ಆ ಕಾದಂಬರಿಯನ್ನು ಖರೀದಿಸುತ್ತಿದ್ದರು.